# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 08(ಜಕ್ಕೂರು)
## ವಾರ್ಡ್‌ಸಮಿತಿ ಸಭೆ, ದಿನಾಂಕ: 07.10.2022 ರ
## ಸಭಾ ನಡುವಳಿ

ದಿನಾಂಕ: 07.10.2022 ರಂದು ಬೆಳ್ಳಿಗೆ 10.30 ಗಂಟೆಗೆ ವಾರ್ಡ್ ನಂ.08 ಜಕ್ಕೂರು ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ದಾಸರಹಳ್ಳಿ ಬಿಬಿಎಂಪಿ ಕಛೇರಿ ಆರಣದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಕೆ.ಎಲ್ ಗಂಗಾಧರಯ್ಯ | ಸಹಾಯಕ ನಿರ್ದೇಶಕರು, ನಗರ ಯೋಜನೆ, ಮತ್ತು ನೋಡಲ್ ಅಧಿಕಾರಿ, ವಾರ್ಡ್ ನಂ. 05(ಜಕ್ಕೂರು) ಹಾಗೂ |
| 2 | ವೈ.ಎನ್ ಮಹಂತೇಶ್ ಕುಮಾರ್ | ಕಾರ್ಯದರ್ಶಿಗಳು, ವಾರ್ಡ್ ಕಮಿಟಿ ವಾರ್ಡ್ ನಂ. 06 , ಮತ್ತು ಸಹಾಯಕ ಅಭಿಯಂತರರು |
| 3 | ಶ್ರೀ ಸೋಮಶೇಖರ್ | ವ್ಯವಸ್ಥಾಪಕರು, ಕಂದಾಯ ಉಪ ವಿಭಾಗ |
| 4 | ಶ್ರೀ ಜಿ. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 08 |
| 5 | ಶ್ರೀ ಅಶ್ವಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 08 |
| 6 | ಶ್ರೀ ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 08 |
| 7 | ಶ್ರೀನಿವಾಸ ಮೂರ್ತಿ ಎಂ | ಎಲೆಕ್ಟ್ರೀಕಲ್ ವಿಭಾಗ, ಬಿಬಿಎಂಪಿ |

ಶ್ರೀ ವೈ.ಎನ್ ಮಹಂತೇಶ್ ಕುಮಾರ್ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಈ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮುಖ ವಿಷಯಗಳ ಬಗ್ಗೆ ವಿವರಿಸುತ್ತಾ ಸದರಿ ಸಭೆಯ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. ವಾರ್ಡ್ ವ್ಯಾಪ್ತಿಯಲ್ಲಿ ಸಾಂಕ್ರಮಿಕ ಕಾಯಿಲೆ ಹರುಡುವ ಸಂಭವ ಇರುವುದರಿಂದ ಸಾರ್ವಜನಿಕರು ಮಳೆಗಾಲವಾಗಿರುವುದರಿಂದ ಮನೆಯ ಅಕ್ಕಪಕ್ಕದಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರಿಕೆ ವಹಿಸಲು ಹಾಗೂ ಡೆಂಗ್ಯೂ ಜ್ವರ ಹಾಗೂ ಚಿಕನ್‌ಗುನ್ಯ ಜ್ವರ ಹರಡುವ ಸಾಧ್ಯತೆಗಳೂ ಹೆಚ್ಚಾಗಿದ್ದು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಂಬಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಲಾಯಿತು.
2. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಜಕ್ಕೂರು ರೈಲ್ವೆ ಸೇತುವೆ ಕೆಳಭಾಗದಲ್ಲಿ ರಸ್ತೆ ನಿರ್ಮಾಣ ಪ್ರಗತಿಯಲ್ಲಿದ್ದು, ಮಳೆ ನೀರು ಸರಾಗವಾಗಿ ಹರಿಯದೇ ಇರುವುದರಿಂದ ವಾಹನ ಸವಾರರಿಗೆ ತುಂಬ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ದೂರಿದರು ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚನೆ ನೀಡಲಾಯಿತು.
3. ವಾರ್ಡ್ ವ್ಯಾಪ್ತಿಯಲ್ಲಿ ಒಣಕಸ ವಿಲೇವಾರಿ ಮಾಡಲು ಹೆಚ್ಚುವರಿ ಆಟೋ ಟಿಪ್ಪರ್‌ಗಳನ್ನು ಮತ್ತು ಪೌರಕಾರ್ಮಿಕರ ಅವಶ್ಯಕತೆ ಇದ್ದು ಈ ಬಗ್ಗೆ ಕ್ರಮ ವಹಿಸಲು ಸ.ಕಾ.ಅ (ಘನತ್ಯಜ್ಯ) ರವರಿಗೆ ಕ್ರಮ ವಹಿಸಲು ಸೂಚನೆ ನೀಡಲಾಯಿತು.



Scanned with OKEN Scanner

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಸಾರ್ವಜನಿಕರು ದೂರಿದರು ಈ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಿ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸೂಚನೆ ನೀಡಲಾಯಿತು.
5. ವಾರ್ಡ್ ಸಾರ್ವಜನಿಕರು ಮಾತನಾಡಿ ರಾಚೇನಹಳ್ಳಿ ರೈಲ್ವೆ ಅಂಡರ್‌ಪಾಸ್ ಹತ್ತಿರ ಮಳೆ ನೀರು ಹರಿಯದೇ ಇರುವುದರಿಂದ ನೀರು ನಿಂತು ವಾಹನ ಸವಾರರಿಗೆ ತುಂಬ ತೊಂದರೆಯಾಗುತ್ತಿದ್ದ ಈ ಬಗ್ಗೆ ಕ್ರಮ ವಹಿಸಲು ಕೋರಿದರು.
6. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಘನ ಸರ್ಕಾರದ ಯೋಜನೆಗಳಾದ ಆರೋಗ್ಯ ಸಂಜೀವಿನಿ ಹಾಗೂ ಆಯುಷ್ಮಾನ್ ಭಾರತ್ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಲಾಯಿತು.
7. ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕ್ರಮ ವಹಿಸಲು ಸಾರ್ವಜನಿಕರು ಕೋರಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು ಹಾಗೂ ಕೋವಿಡ್-19ರ ಸಂಬಂಧ ಮೇಲಾಧಿಕಾರಿಗಳಿಂದ ಬರುವ ಸೂಚನೆ ಮತ್ತು ಆದೇಶಗಳನ್ನು ನಿಯಮಾಸುಸಾರ ಪಾಲಿಸುವಂಥೆ ಹಾಗೂ ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸೂಚಿಸುತ್ತಾ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರುವಂಥೆ ಕ್ರಮ ವಹಿಸಲು ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 08(ಜಕ್ಕೂರು)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 08, (ಜಕ್ಕೂರು)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.

Scanned with OKEN Scanner